# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ/41/ಸಿಎಲ್‌ಎಸ್/2011

ಕರ್ನಾಟಕ ಸರ್ಕಾರದ ಸಚಿವಾಲಯ,
ಸಹಕಾರ ಇಲಾಖೆ,
ಬೆಂಗಳೂರು, ದಿನಾಂಕ: 09.02.2011

## ಸುತ್ತೋಲೆ

ವಿಷಯ : 2011–12ನೇ ಸಾಲಿಗೆ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ: ಸಿಒ 9 ಸಿಎಲ್‌ಎಸ್ 2010 ದಿನಾಂಕ: 01.02.2010 ಮತ್ತು ತಿದ್ದುಪಡಿ ಸುತ್ತೋಲೆ ದಿನಾಂಕ: 29–07–2010
2. ಯಶಸ್ವಿನಿ ಟ್ರಸ್ಟಿನ ಸಭಾ ನಡುವಳಿ ದಿನಾಂಕ: 19–01–2011.

*****

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯು 2003–04ನೇ ಸಾಲಿನಿಂದ ರಾಜ್ಯದ ಗ್ರಾಮೀಣ ಸಹಕಾರಿಗಳಿಗೆ ಉತ್ತಮ ಗುಣಮಟ್ಟದ ಆರೋಗ್ಯ ರಕ್ಷಣೆಯನ್ನು ಒದಗಿಸಲು ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ಒಂದು ಸ್ವಯಂ–ನಿಧಿ ಶಸ್ತ್ರ ಚಿಕಿತ್ಸಾ ಯೋಜನೆಯಾಗಿದೆ. ಒಬ್ಬ ವ್ಯಕ್ತಿ ಗ್ರಾಮೀಣ ಸಹಕಾರ ಸಂಘಗಳಾದ ಸಹಕಾರ ಕೃಷಿಪತ್ತಿನ / ಕೃಷಿಯೇತರ ಸಹಕಾರ ಸಂಘಗಳ, ವಿವಿಧ್ದೋದ್ದೇಶ ಸಹಕಾರ ಸಂಘಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ, ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ, ತೋಟಗಾರಿಕಾ ಸಹಕಾರ ಸಂಘಗಳ (ಕೃಷಿ/ತೋಟಗಾರಿಕೆ/ಹೈನುಗಾರಿಕೆ ಉತ್ಪನ್ನಗಳ ಸಂಸ್ಕರಣ ಸಹಕಾರ ಸಂಘಗಳೂ ಸೇರಿ), ಸಹಕಾರಿ ಸಕ್ಕರೆ ಕಾರ್ಖಾನೆಗಳ, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳ, ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಮೀನುಗಾರರ, ಬೀಡಿಕಾರ್ಮಿಕರ ಮತ್ತು ನೇಕಾರ ಸಹಕಾರ ಸಂಘ ಇತ್ಯಾದಿಗಳೊಂದರ ಸದಸ್ಯನಾಗಿ ಕನಿಷ್ಠ ಆರು ತಿಂಗಳಾಗಿದ್ದಲ್ಲಿ, ಆತನು ಹಾಗೂ ಅವನ ಕುಟುಂಬದ ಎಲ್ಲಾ ಸದಸ್ಯರು ಪ್ರತಿವರ್ಷ ನಿಗದಿತ ವಂತಿಗೆಯನ್ನು ಪಾವತಿ ಮಾಡುವ ಮೂಲಕ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದು. ಅಲ್ಲದೆ ಸಹಕಾರ ಸಂಘ/ಬ್ಯಾಂಕ್‌ಗಳೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದಲ್ಲಿರುವ ಸ್ವ–ಸಹಾಯ ಗುಂಪು ಹಾಗೂ ಸ್ತ್ರೀ ಶಕ್ತಿ ಗುಂಪಿನ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಕೂಡ ಯೋಜನೆಯ ಸೌಲಭ್ಯ ಪಡೆಯಬಹುದು.

ದಿನಾಂಕ 19–01–2011ರಂದು ಜರುಗಿದ ಯಶಸ್ವಿನಿ ಟ್ರಸ್ಟ್ ಸಭೆಯಲ್ಲಿ ಯಶಸ್ವಿನಿ ಯೋಜನೆಯನ್ನು ಸ್ವಯಂ ನಿಧಿ ಶಸ್ತ್ರಚಿಕಿತ್ಸಾ ಯೋಜನೆಯನ್ನಾಗಿ ಬಲಗೊಳಿಸುವ ದಿಸೆಯಲ್ಲಿ ಚರ್ಚಿಸಿ, ಈ ಕೆಳಗೆ ವಿವರಿಸಿರುವ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಗ್ರಾಮೀಣ ವರ್ಗದವರಿಗೆ ಮತ್ತು ಅವರ ಕುಟುಂಬ ಸದಸ್ಯರುಗಳಿಗೆ ಕೂಡಾ ಯೋಜನೆಯ ಸೌಲಭ್ಯವನ್ನು 2011–12ನೇ ಸಾಲಿನಿಂದ ವಿಸ್ತರಿಸಲು ತೀರ್ಮಾನಿಸಲಾಗಿದೆ.

- ರಾಜ್ಯದ ಗ್ರಾಮೀಣ ಪ್ರದೇಶದ ಚಲನಚಿತ್ರಕಲಾವಿದರುಗಳ, ರಂಗಭೂಮಿಕಲಾವಿದರುಗಳ, ಜಾನಪದಕಲಾವಿದರುಗಳ ಸಾಂಸ್ಕೃತಿಕ ಅಭಿವೃದ್ಧಿ ಸಹಕಾರ ಸಂಘಗಳು

- ಗ್ರಾಮೀಣ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿದ್ದು ಕಾಫಿ ಬೆಳೆಯುವ ಜಿಲ್ಲೆಗಳ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಪ್ಲಾಂಟೇಷನ್ ಕಾರ್ಮಿಕರುಗಳು

- ಗ್ರಾಮೀಣ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಕೃಷಿ ಕ್ಷೇತ್ರದಿಂದ ಆಯ್ಕೆಯಾಗಿರುವ ರೈತ ಪ್ರತಿನಿಧಿಗಳು

- ರಾಜ್ಯದ ಪತ್ರಕರ್ತರ ಪತ್ತಿನ ಸಹಕಾರ ಸಂಘದಲ್ಲಿ ಸದಸ್ಯತ್ವ ಹೊಂದಿರುವ ಗ್ರಾಮೀಣ ಪತ್ರಕರ್ತರುಗಳು (ಪಟ್ಟಣ ಪ್ರದೇಶದ ಪತ್ರಕರ್ತ ಸದಸ್ಯರನ್ನು ಹೊರತುಪಡಿಸಿ)

- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಅಲೆಮಾರಿ, ಅರೆ–ಅಲೆಮಾರಿ ಜನಾಂಗಗಳ ವಿವಿದ್ದೋದ್ದೇಶ ಸಹಕಾರಿ ಸಂಘಗಳು ಹಾಗೂ ಇತರೆ ವಿವಿದ್ದೋದ್ದೇಶ ಸಹಕಾರ ಸಂಘಗಳು

- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ-ಸಹಾಯ ಗುಂಪು ಮತ್ತು ಸ್ತ್ರೀ-ಶಕ್ತಿ ಗುಂಪುಗಳ ಸದಸ್ಯರು
- ಗ್ರಾಮೀಣ ಪ್ರದೇಶದಲ್ಲಿನ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಲೈಂಗಿಕ ಅಲ್ಪಸಂಖ್ಯಾತರು (ಮಂಗಳ ಮುಖಿಯರು)

2011-12ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯ ಅನುಷ್ಠಾನಕ್ಕಾಗಿ ಕೆಳಗಿನ ಮಾರ್ಗಸೂಚಿ ನಿಯಮಗಳನ್ನು ಹೊರಡಿಸಲಾಗಿದೆ.

1. ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಒಬ್ಬ ವ್ಯಕ್ತಿ ಮೇಲೆ ಸೂಚಿಸಿರುವ ಯಾವುದೇ ಒಂದು ಸಹಕಾರ ಸಂಘದ ಸದಸ್ಯನಾಗಿರಬೇಕು. ಅಂದರೆ ಆತನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ 1997ರ ಅಡಿ ಅಥವಾ ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮ 2007ರ ಅಡಿ ನೋಂದಾಯಿಸಿದ ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಯಶಸ್ವಿನಿ ವರ್ಷದ ಮೊದಲ ದಿನ ಅಂದರೆ 01.06.2011ಕ್ಕೆ ಕನಿಷ್ಠ ಆರು ತಿಂಗಳಾಗಿರಬೇಕು.

2. ಆದಾಗ್ಯೂ ನಗರ/ ಪಟ್ಟಣದ ಜೊತೆಗೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶದಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳ/ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ಮಹಾನಗರಪಾಲಿಕೆ/ನಗರ/ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರು ಸದಸ್ಯತ್ವ ಹೊಂದಿರುವ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಕೃಷಿ ಜಮೀನು ಹೊಂದಿರುವವರು, ಈಗಾಗಲೇ ಕಳೆದ ಸಾಲುಗಳಲ್ಲಿ ಯೋಜನೆಯಡಿಯಲ್ಲಿ ಸದಸ್ಯತ್ವ ನೊಂದಾವಣೆಯಾಗಿದ್ದಲ್ಲಿ, ಪ್ರಸಕ್ತ ಸಾಲಿಗೂ ಸಹ ಅಂತಹವರುಗಳು ಯೋಜನೆಯಡಿಯಲ್ಲಿ ನವೀಕರಿಸಲು /ನೋಂದಾಯಿಸಲು ಅರ್ಹರಾಗಿತ್ತಾರೆ.

3. ಅವಿಭಕ್ತ ಕುಟುಂಬದ ಯಾವುದೇ ಒಬ್ಬ ಸದಸ್ಯನು/ಸದಸ್ಯಳು ಮೇಲೆ ತಿಳಿಸಿರುವ ಅರ್ಹ ಸಹಕಾರ ಸಂಘದ ಸದಸ್ಯನಾಗಿ/ಳಾಗಿ ಯಶಸ್ವಿನಿ ವರ್ಷದ ಮೊದಲ ದಿನ ಅಂದರೆ 01.06.2011 ಕ್ಕೆ ಆರು ತಿಂಗಳಾಗಿದ್ದಲ್ಲಿ, ಕುಟುಂಬದ ಪ್ರತಿಯೊಬ್ಬ ಸದಸ್ಯನೂ ನಿಗದಿತ ಅವಧಿಯಲ್ಲಿ ವಾರ್ಷಿಕ ವಂತಿಗೆ ಸಲ್ಲಿಸುವ ಮೂಲಕ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದು. ಅವಿಭಕ್ತ ಕುಟುಂಬ ಅಂದರೆ ತಂದೆ, ತಾಯಿ, ಗಂಡು/ಹೆಣ್ಣು ಮಕ್ಕಳು (ಮದುವೆಯಾದ/ಮದುವೆಯಾಗದ) ಸೊಸೆ, ಮೊಮ್ಮಕ್ಕಳೂ ಸೇರಿ ಎಂದು ಅರ್ಥೈಯಿಸುವುದು.

4. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಕುಟುಂಬದಲ್ಲಿಯೇ ಅಂದರೆ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿ ವಾಸವಾಗಿದ್ದರೆ, ಅವರ ಪಾಲಿನ ವಂತಿಗೆ ಹಣ ಪಾವತಿಸಿದರೆ ನವೀಕರಣ/ನೋಂದಾವಣೆಗೆ ಹಾಗೂ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಆದಾಗ್ಯೂ, 2011-12 ನೇ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಹೆಣ್ಣು ಮಗಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಜೊತೆ ವಾಸವಾಗಿರದೆ ಸಂಘದ ಕಾರ್ಯವ್ಯಾಪ್ತಿಯ ಹೊರಗೆ ವಾಸವಿದ್ದರೆ ಅಂಥಹ ಸಂದರ್ಭದಲ್ಲಿ ಮೇಲೆ ವಿವರಿಸಿದಂತೆ ಅವಿಭಕ್ತ ಕುಟುಂಬದ ಸದಸ್ಯೆಯಾಗಿ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗುವುದಿಲ್ಲ. ಆದರೆ, ಅವಳೇ ಸಹಕಾರ ಸಂಘದ ಸದಸ್ಯೆಯಾಗಿ ಯಶಸ್ವಿನಿ ವರ್ಷದ ಮೊದಲ ದಿನಕ್ಕೆ ಆರು ತಿಂಗಳು ಕಳೆದಿದ್ದಲ್ಲಿ, ಈ ನಿರ್ಬಂಧ ಅಂಥವಳಿಗೆ ಅನ್ವಯಿಸುವುದಿಲ್ಲ.

5. 2011-12ನೇ ಸಾಲಿಗೆ ಯಶಸ್ವಿನಿ ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರಿಗೆ ರೂ.150/- ರಿಂದ ರೂ.160/-ಕ್ಕೆ ಹೆಚ್ಚಿಸಲಾಗಿದೆ. ಆದ್ದರಿಂದ ಫಲಾನುಭವಿಯು ವಯಸ್ಕನಾಗಿರಲಿ, ಅಪ್ರಾಪ್ತ ವಯಸ್ಕನಾಗಿರಲಿ, ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರು ರೂ.160/- ರಂತೆ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಕಡ್ಡಾಯವಾಗಿ ಪಾವತಿ ಮಾಡಬೇಕು. ಈ ಪೈಕಿ ರೂ.10 ಅನ್ನು ಸಂಘದ ಸಾದಿಲ್ವಾರು ವೆಚ್ಚಕ್ಕೆ ಮತ್ತು ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹಧನವಾಗಿ ಸಹಕಾರ ಸಂಘ/ಸಂಸ್ಥೆಯು ಇಟ್ಟುಕೊಂಡು, ಉಳಿದ ರೂ.150/-ಗಳನ್ನು ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡಬೇಕು/ವರ್ಗಾಯಿಸತಕ್ಕದ್ದು. ವಿಳಂಬವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರಿ ಸಂಘ/ಸಂಸ್ಥೆಯವರು ಬ್ಯಾಂಕಿನ ನಿಯಮಗಳ ಪ್ರಕಾರ ವಿಳಂಬದ ಅವಧಿಗೆ ಬಡ್ಡಿ ಪಾವತಿ ಮಾಡಲು ಬದ್ಧರಾಗುತ್ತಾರೆ.

6. ಒಂದೇ ಕುಟುಂಬದ ಸದಸ್ಯರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸಿದಲ್ಲಿ, ನೀಡಲಾಗುತ್ತಿರುವ ವಿಶೇಷ ರಿಯಾಯಿತಿಯನ್ನು ಪ್ರಸಕ್ತ ವರ್ಷ ಅಂದರೆ 2011–12ನೇ ಸಾಲಿಗೂ ಮುಂದುವರಿಸಲಾಗಿದೆ. ಯಾವುದೇ ಒಂದು ಕುಟುಂಬದಲ್ಲಿ ಐವರು ಅಥವಾ ಅದಕ್ಕಿಂತ ಹೆಚ್ಚಿಗೆ ಕುಟುಂಬ ಸದಸ್ಯರನ್ನು ಯಶಸ್ವಿನಿ ಫಲಾನುಭವಿಗಳನ್ನಾಗಿ ನೋಂದಾಯಿಸಿದಲ್ಲಿ/ನವೀಕರಿಸಿದಲ್ಲಿ ಅವರು ಪಾವತಿಸಬೇಕಾದ ವಂತಿಗೆ ಹಣದಲ್ಲಿ ಅಂದರೆ ಪ್ರತಿ ಸದಸ್ಯರಿಗೆ ರೂ.150/–ರಲ್ಲಿ ಶೇ.15 ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ.

7. ಯಶಸ್ವಿನಿ ಫಲಾನುಭವಿಯಾಗಲು ನಿಗದಿಗೊಳಿಸಿದ ಗರಿಷ್ಠ ವಯೋಮಿತಿ 75 ವರ್ಷ ಮುಂದುವರಿದಿರುತ್ತದೆ. ಅಂದರೆ ಯಾವುದೇ ಒಬ್ಬ ವ್ಯಕ್ತಿಯು ಯೋಜನೆಯ ಸೌಲಭ್ಯವನ್ನು ಪಡೆಯಲು ಯಶಸ್ವಿನಿ ವರ್ಷ ಪ್ರಾರಂಭ ಆಗುವ ದಿನ ಅಂದರೆ 2011 ಜೂನ್ ಒಂದರಂದು 75 ವರ್ಷ ಮುಗಿಸಿದ್ದಲ್ಲಿ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹನಾಗುವುದಿಲ್ಲ. ಆದ್ದರಿಂದ 75 ವರ್ಷ ವಯಸ್ಸಾದ ಪ್ರಧಾನ ಅರ್ಜಿದಾರರಿಗೆ ಅವರ ಪಾಲಿನ ವಂತಿಗೆ ಹಣ ಪಾವತಿಸುವುದರಿಂದ ಮಾತ್ರ ವಿನಾಯಿತಿ ನೀಡಲಾಗಿದೆ. ಆದಾಗ್ಯೂ ಉಳಿದಂತೆ ಪ್ರತಿಯೊಬ್ಬ ಪ್ರಧಾನ ಅರ್ಜಿದಾರರು ಹಾಗೂ ಅವರ ಕುಟುಂಬದ ಅರ್ಹ ಸದಸ್ಯರು ತಮ್ಮ ಪಾಲಿನ ವಂತಿಗೆ ಹಣವನ್ನು ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದ್ದಲ್ಲಿ ಅಂಥವರು ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

8. ಯಶಸ್ವಿನಿ ಯೋಜನೆಯು ಒಂದು ಸ್ವಂತ ಬಂಡವಾಳ ಯೋಜನೆಯಾಗಿದ್ದು, ಯೋಜನೆಯಡಿ ಸದಸ್ಯರಿಂದ ಸಂಗ್ರಹಿಸಿದ ವಂತಿಗೆಯ ಮೊತ್ತಕ್ಕಿಂತ ಶಸ್ತ್ರಚಿಕಿತ್ಸಾ ವೆಚ್ಚ ಪ್ರತಿ ವರ್ಷ ಹೆಚ್ಚಿಗೆ ಪಾವತಿ ಆಗುತ್ತಿದೆ. ಯೋಜನೆಯ ಸಬಲತೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಫಲಾನುಭವಿಗಳನ್ನು ನೋಂದಾಯಿಸಲು ಪ್ರಯತ್ನಿಸುವುದು ಅತೀ ಅವಶ್ಯವಾಗಿದೆ. 2003–04ರಲ್ಲಿ ಯೋಜನೆಯನ್ನು ಸುಮಾರು 16.00 ಲಕ್ಷ ಫಲಾನುಭವಿಗಳ ನೋಂದಾವಣೆಯೊಂದಿಗೆ ಪ್ರಾರಂಭಿಸಲಾಗಿದ್ದು, ಪ್ರತಿ ವರ್ಷಗಳಲ್ಲಿ ನೋಂದಾವಣೆ ಪ್ರಗತಿಯಾಗುತ್ತಾ ಬಂದಿದ್ದು, 2009–10ನೇ ಸಾಲಿನಲ್ಲಿ ಗರಿಷ್ಠ 30.69 ಲಕ್ಷ ಸದಸ್ಯ ನೋಂದಾವಣೆ ಆಗಿರುತ್ತದೆ. ಗ್ರಾಮೀಣ ಪ್ರದೇಶದ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಯೇ ಸುಮಾರು 96 ಲಕ್ಷ ಇರುವುದನ್ನು ಮತ್ತು ಗ್ರಾಮೀಣ ಪ್ರದೇಶದ ಸ್ತ್ರೀ ಶಕ್ತಿ ಗುಂಪು/ ಸ್ವಸಹಾಯ ಗುಂಪುಗಳ ಸದಸ್ಯರ ಸಂಖ್ಯೆಯನ್ನು ಗಮನಿಸಿದಾಗ ಯೋಜನೆಗೆ ಒಳಪಡಿಸಬೇಕಾದವರ ಸಂಖ್ಯೆ ಹೆಚ್ಚಿಗೆ ಇರುತ್ತದೆ. ಆದ್ದರಿಂದ, 2011–12ನೇ ಸಾಲಿನಲ್ಲಿ ಕನಿಷ್ಠ 40 ಲಕ್ಷ ಫಲಾನುಭವಿಗಳನ್ನು ನೋಂದಾಯಿಸುವ ಗುರಿ ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಸಹಕಾರ ಸಂಘಗಳ ನಿಬಂಧಕರು ಪ್ರತಿ ಜಿಲ್ಲೆಗೆ ಪ್ರತ್ಯೇಕ ಗುರಿ ನಿಗದಿಗೊಳಿಸುವಂತೆ ಸೂಚಿಸಲಾಗಿದೆ.

9. 2010–11ನೇ ಸಾಲಿನಲ್ಲಿ 29.73 ಲಕ್ಷ ಫಲಾನುಭವಿಗಳನ್ನು ನೋಂದಾಯಿಸಿದ್ದು, ಅವರೆಲ್ಲರೂ 2011–12 ನೇ ಸಾಲಿಗೆ ಯಶಸ್ವಿನಿ ಫಲಾನುಭವಿಗಳಾಗಿ ನವೀಕರಿಸುವಂತೆ ನೋಡಿಕೊಳ್ಳತಕ್ಕದ್ದು.

10. 2011–12ನೇ ಸಾಲಿಗೆ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ ಕಾರ್ಯಕ್ರಮವನ್ನು ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

ಅ) ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ/ ನವೀಕರಿಸುವ ಪ್ರಕ್ರಿಯೆಯನ್ನು
ಪ್ರಾರಂಭ ಮಾಡುವ ದಿನಾಂಕ: 15.02.2011.

ಆ) ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ/ ನವೀಕರಿಸುವ
ಮುಕ್ತಾಯ ದಿನಾಂಕ: 31.05.2011.

ಮೇಲೆ ನಮೂದಿಸಿದ ದಿನಾಂಕಗಳ ನಂತರದ ಅವಧಿ ಮುಂದುವರಿಯದಿದ್ದಲ್ಲಿ, ಯಶಸ್ವಿನಿ ಫಲಾನುಭವಿಗಳ ನೋಂದಾಯಿಸುವಿಕೆಗೆ/ ನವೀಕರಣಕ್ಕೆ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ನಿಗದಿತ ದಿನಾಂಕಗಳ ನಂತರ ನೋಂದಾಯಿಸಿದಲ್ಲಿ ಅಂಥವರು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ.

11. 2011–12ನೇ ಸಾಲಿನಲ್ಲಿ ಯಶಸ್ವಿನಿ ಫಲಾನುಭವಿಗಳನ್ನು ಹೊಸದಾಗಿ ನೋಂದಾಯಿಸಲು 2010–11ನೇ ಸಾಲಿನಲ್ಲಿ ಉಪಯೋಗಿಸದೇ ಬಾಕಿ ಉಳಿದಿರುವ ನೋಂದಾವಣೆ ಫಾರಂಗಳನ್ನು ಮಾತ್ರ

ಉಪಯೋಗಿಸಬೇಕು. ಬೇರೆ ಯಾವುದೇ ವರ್ಷಗಳಲ್ಲಿ ನೀಡಿರುವ ಫಾರಂಗಳನ್ನು ಉಪಯೋಗಿಸತಕ್ಕದ್ದಲ್ಲ. ಹೊಸದಾಗಿ ಫಲಾನುಭವಿಗಳ ನೋಂದಾವಣೆಗೆ ಬೇಕಾದ ಅವಶ್ಯಕ ಸಂಖ್ಯೆಯ ಫಾರಂಗಳನ್ನು ಸಹಕಾರ ಸಂಘಗಳ ಉಪನಿಬಂಧಕರುಗಳು ಟ್ರಸ್ಟ್ ಕಛೇರಿಯಿಂದ ಪಡೆದು ಅವರ ವ್ಯಾಪ್ತಿಯ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಫಾರಂ ಪುಸ್ತಕಗಳನ್ನು ಹಂತಹಂತವಾಗಿ ಪೂರೈಸಿ ಸ್ವೀಕೃತಿ ಪಡೆಯಬೇಕು. ಒಮ್ಮೆ ಪೂರೈಸಿದ ಫಾರಂಗಳಲ್ಲಿ ಸಹಕಾರ ಸಂಘದವರು ಮಾಹಿತಿಯನ್ನು ಪೂರ್ತಿಯಾಗಿ ನಮೂದಿಸಿ ವಂತಿಗೆ ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ ನಂತರವೇ ಮತ್ತೆ ಫಾರಂಗಳನ್ನು ಒದಗಿಸಬೇಕು. ಸಹಕಾರ ಸಂಘಕ್ಕೆ ಫಾರಂ ಪೂರೈಸುವಾಗ ಪುಸ್ತಕದ ಸಂಖ್ಯೆ ಮತ್ತು ಯುನಿಕ್ ಐ.ಡಿ ಸಂಖ್ಯೆಯನ್ನು ನಮೂದಿಸಿ ಕಾರ್ಯದರ್ಶಿಯಿಂದ ಸ್ವೀಕೃತಿ ಪಡೆದುಕೊಳ್ಳಬೇಕು. ಈ ಬಗ್ಗೆ ಪರಿಶೀಲನೆಗಾಗಿ ಪ್ರತ್ಯೇಕ ಪುಸ್ತಕದಲ್ಲಿ ಬರೆದಿಟ್ಟಿರಬೇಕು.

12. ಅರ್ಹ ಸಹಕಾರ ಸಂಘಗಳು ಫಲಾನುಭವಿಗಳಿಂದ ನಿಗದಿತ ವಾರ್ಷಿಕ ವಂತಿಗೆ ಹಣ ಪಡೆದು ಸಂಘದ ಹಣ ಸ್ವೀಕೃತಿ ರಶೀದಿಯನ್ನು ಕೊಡಬೇಕು. ಫಾರಂನಲ್ಲಿ ಫಲಾನುಭವಿಯನ್ನು ನೋಂದಾಯಿಸಿದ ತಿಂಗಳು, ವರ್ಷ ಮತ್ತು ದಿನಾಂಕವನ್ನು ತಪ್ಪದೆ ನಮೂದಿಸಬೇಕು. ನೋಂದಾವಣೆ ಫಾರಂನ ಕೆಳಭಾಗವನ್ನು ಫಲಾನುಭವಿಗೆ ಕೊಡಬೇಕು. ಮೇಲ್ಭಾಗವನ್ನು ಡಾಟಾಎಂಟ್ರಿ ಮಾಡಲು ಸಂಬಂಧಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಿಗೆ ಕಳಿಸಬೇಕು. [ಫಾರಂ ಭರ್ತಿ ಮಾಡುವ ಬಗ್ಗೆ ವಿವರವಾದ ಸೂಚನೆಗಳನ್ನು ಟ್ರಸ್ಟಿನಿಂದ ಪ್ರತ್ಯೇಕ ನೀಡಲಾಗುವುದು.]

13. 2011–12ನೇ ಸಾಲಿನಲ್ಲಿ ನೋಂದಾವಣೆ ನವೀಕರಿಸಲು ಹಾಗೂ ಅದೇ ಕುಟುಂಬದ ಹೊಸ ಸದಸ್ಯರ ಸೇರ್ಪಡೆಗೆ ಈ ಕೆಳಗಿನಂತೆ ಕ್ರಮವಹಿಸತಕ್ಕದ್ದು:–

ಅ) 2010–11ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸಿದ್ದ/ನವೀಕರಿಸಿದ್ದ ಯಶಸ್ವಿನಿ ಫಲಾನುಭವಿಗಳ ನೋಂದಾವಣೆಯನ್ನು 2011–12ನೇಸಾಲಿನಲ್ಲಿ ನವೀಕರಿಸಲು ಪ್ರತಿಯೊಬ್ಬ ವ್ಯಕ್ತಿಯಿಂದಲೂ ನಿಗದಿತ ವಾರ್ಷಿಕ ವಂತಿಗೆ ರೂ.160/–ರಂತೆ ಹಣ ಪಡೆದು ಸಂಘದ ಹಣ ಸ್ವೀಕೃತಿ ರಶೀದಿಯನ್ನು ಫಲಾನುಭವಿಗೆ ಕೊಡಬೇಕು. ಹಣ ಸ್ವೀಕೃತಿ ರಶೀದಿಯಲ್ಲಿ ಮತ್ತು ನವೀಕರಣ ನಮೂನೆಯಲ್ಲಿ ಈಗಾಗಲೇ ಅವರ ಕುಟುಂಬಕ್ಕೆ ಕೊಡಮಾಡಿದ ಯುನಿಕ್ಐ.ಡಿ ಸಂಖ್ಯೆಯನ್ನು ತಪ್ಪದೆ ನಮೂದಿಸಬೇಕು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಇತರ ಸದಸ್ಯರ ಹೆಸರು, ವಯಸ್ಸು, ಸಂಬಂಧ ಮತ್ತು ಇತರೆ ವಿವರಗಳನ್ನು ನಮೂದಿಸಬೇಕು.

ಆ) 2010–11ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸಿದ್ದ/ನವೀಕರಿಸಿದ್ದ ಪ್ರಧಾನ ಅರ್ಜಿದಾರರ ಕುಟುಂಬದ ಯಾವುದೇ ಒಬ್ಬ ಸದಸ್ಯರನ್ನು 2011–12ನೇ ಸಾಲಿನಲ್ಲಿ ಹೊಸದಾಗಿ ಸೇರಿಸಲು ಬಯಸಿದಲ್ಲಿ, ಅಂತಹ ಫಲಾನುಭವಿಯ ಯಶಸ್ವಿನಿ ವಾರ್ಷಿಕ ವಂತಿಗೆ ಹಣವನ್ನು ಪಡೆದು ಸಂಘದ ಸ್ವೀಕೃತಿ ರಶೀದಿಯಲ್ಲಿ ಮತ್ತು ನವೀಕರಣ ನಮೂನೆಯಲ್ಲಿ ಅವರ ಹೆಸರನ್ನು ನಮೂದಿಸಬೇಕು. ಹೊಸದಾಗಿ ಸೇರ್ಪಡೆಯಾದ ಫಲಾನುಭವಿಯ ಫೋಟೋವನ್ನು ಡಾಟಾ ಎಂಟ್ರಿಗೆ ಕಳುಹಿಸುವ ನವೀಕರಣ ನಮೂನೆಯ ಹಿಂಭಾಗದಲ್ಲಿ ಅಂಟಿಸಿ, (ಆದರೆ ಕಡ್ಡಾಯವಾಗಿ ಪೋಟೋವನ್ನು ಪಿನ್ನು (**stapler**) ಮಾಡಬಾರದು) ಅದರಲ್ಲಿ ಈಗಾಗಲೇ ಅವರ ಕುಟುಂಬಕ್ಕೆ ಕೊಡಮಾಡಿದ ಯುನಿಕ್ ಐ.ಡಿ ಸಂಖ್ಯೆಯನ್ನು ತಪ್ಪದೆ ನಮೂದಿಸಬೇಕು ಹಾಗೂ ಹೊಸದಾಗಿ ಸೇರ್ಪಡೆಯಾದ ಅದೇ ಕುಟುಂಬ ಸದಸ್ಯರ ಹೆಸರು ಮತ್ತು ಪ್ರಧಾನ ಅರ್ಜಿದಾರರೊಂದಿಗಿನ ಸಂಬಂಧ ಹಾಗೂ ಇತರೆ ವಿವರಗಳನ್ನು ಬರೆಯಬೇಕು.

ಇ) 2011–12ನೇ ಸಾಲಿನಲ್ಲಿ ನವೀಕರಣ/ಸೇರ್ಪಡೆಯಾದ ಫಲಾನುಭವಿಗಳ ಎಲ್ಲಾ ಮಾಹಿತಿಯನ್ನು ಉಲ್ಲೇಖ (1)ರ ಸುತ್ತೋಲೆಯಲ್ಲಿ ಲಗತ್ತಿಸಿದ್ದ ನಮೂನೆಯಲ್ಲಿ ಭರ್ತಿಮಾಡಿ, ಈಗಾಗಲೇ ಆ ಕುಟುಂಬಕ್ಕೆ ಕೊಡಮಾಡಿದ್ದ ಯುನಿಕ್ ಐ.ಡಿ ಸಂಖ್ಯೆಯನ್ನು ತಪ್ಪದೆ ನಮೂದಿಸಿ, ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಇತರ ಸದಸ್ಯರ ಹೆಸರು, ಸಂಬಂಧ, ವಯಸ್ಸನ್ನು ಇತ್ಯಾದಿ ವಿವರಗಳನ್ನು ನಮೂದಿಸಿ ಅವಶ್ಯವಿದ್ದಲ್ಲಿ ಫೋಟೊ ಅಂಟಿಸಿ ಸಹಕಾರ ಸಂಘದ ಕಾರ್ಯದರ್ಶಿಯವರು/ ಮ್ಯಾನೇಜರ್‌ರವರು ಸಂಘದ ಸೀಲು ಹಾಕಿ ಸಹಿ ಮಾಡಬೇಕು ಹಾಗೂ ಈ ನಮೂನೆಯನ್ನು ಡಾಟಾ ಎಂಟ್ರಿಗಾಗಿ ಸಹಕಾರ ಸಂಘಗಳ ಉಪನಿಬಂಧಕರಿಗೆ ಕಳುಹಿಸಿ ಕೊಡಬೇಕು

14. 2011–12ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆ/ನವೀಕರಣಗೊಂಡ/ ಸೇರ್ಪಡೆಯಾದ ಫಲಾನುಭವಿಗಳಿಗೆ ಸಂಘವು ವಾರ್ಷಿಕ ವಂತಿಗೆ ಹಣ ಪಡೆದು ನೀಡಿರುವ ಸ್ವೀಕೃತಿ ರಶೀದಿಯನ್ನು ಮತ್ತು ಹೊಸ ನೋಂದಾವಣೆ ಫಾರಂನ ಫಲಾನುಭವಿ ಪ್ರತಿಯನ್ನು ಸದಸ್ಯರು 2011–12ನೇ ಸಾಲಿನ ಅಂತ್ಯದವರೆಗೆ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಮತ್ತು ಯೋಜನೆಯ ಸೌಲಭ್ಯವನ್ನು ಪಡೆಯುವ ಸಂದರ್ಭದಲ್ಲಿ ರಶೀದಿಯನ್ನು ಟ್ರಸ್ಟಿನಿಂದ ಅಂಗೀಕರಿಸಲ್ಪಟ್ಟ ಆಸ್ಪತ್ರೆಗಳಿಗೆ ಕಡ್ಡಾಯವಾಗಿ ಹಾಜರುಪಡಿಸಬೇಕು ಎಂಬ ತಿಳಿವಳಿಕೆ ನೀಡತಕ್ಕದ್ದು.

15. 2008–09ರ ಸಾಲಿನಿಂದ ಫಲಾನುಭವಿಗಳಿಗೆ ಯುನಿಕ್ ಐಡಿ ಸಂಖ್ಯೆಯನ್ನು ನೀಡಿ ಫಲಾನುಭವಿಗಳ ಮಾಹಿತಿಯನ್ನು ಯಶಸ್ವಿನಿ ವೆಬ್‌ಸೈಟ್ www.yeshasvini.kar.nic.in/yeshsearch ನಲ್ಲಿ ಅಳವಡಿಸಲಾಗಿದೆ. 2009–10ನೇ ಸಾಲಿನಿಂದ ಹೊಸದಾಗಿ ನೋಂದಾವಣೆಯಾಗಿದ್ದ ಫಲಾನುಭವಿಗಳು ಮತ್ತು ನವೀಕರಣಗೊಂಡಿದ್ದ ಫಲಾನುಭವಿಗಳ ಮಾಹಿತಿಯನ್ನು ಕೂಡಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಆದ್ದರಿಂದ 2008–09 ಮತ್ತು ಅದಕ್ಕಿಂತ ಹಿಂದೆ ಯೋಜನೆಯ ಫಲಾನುಭವಿಗಳಾಗಿದ್ದವರು ಮತ್ತು ನಂತರ ನೋಂದಾವಣೆ ನವೀಕರಿಸದೇ ಇದ್ದವರು, 2011–12ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ಸೇರಲು ಬಯಸಿದಲ್ಲಿ, ಅಂತಹ ಫಲಾನುಭವಿಗಳನ್ನು ನೋಂದಾಯಿಸಲು ಹೊಸ ನೋಂದಾವಣಿ ಫಾರಂಗಳನ್ನು ಉಪಯೋಗಿಸಬೇಕು.

16. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ವ್ಯವಸಾಯ ಸೇವಾ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳು ಬೆಳೆ ಸಾಲ/ಮಧ್ಯಮಾವಧಿ ಸಾಲಗಳ ವಿತರಣೆ/ವಸೂಲಾತಿ ಸಮಯದಲ್ಲಿ ಸಾಲಗಾರ ಸದಸ್ಯರ ಕುಟುಂಬದ ಅರ್ಹರನ್ನು ಯಶಸ್ವಿನಿ ವಾರ್ಷಿಕ ವಂತಿಗೆ ಹಣವನ್ನು ಕಡ್ಡಾಯವಾಗಿ ಪಡೆದು ನೋಂದಾವಣೆಯನ್ನು ಮಾಡಬೇಕು. ಈ ಪದ್ಧತಿಯನ್ನು ರಾಜ್ಯದ ಕೆಲವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳು ಈಗಾಗಲೇ ಪ್ರಾರಂಭಿಸಿದ್ದು, ಇದನ್ನು ಉಳಿದ ಬ್ಯಾಂಕುಗಳು ಕೂಡ ಅನುಸರಿಸತಕ್ಕದ್ದು,

17. ಅದೇ ರೀತಿ ಪಿಕಾರ್ಡ್ ಬ್ಯಾಂಕುಗಳೂ ಕೂಡ ದೀರ್ಘಾವಧಿ ಸಾಲ ವಿತರಣೆ/ ವಸೂಲಾತಿ ಸಂದರ್ಭದಲ್ಲಿ ಯಶಸ್ವಿನಿ ವಾರ್ಷಿಕ ವಂತಿಗೆ ಹಣವನ್ನು ಸಾಲಗಾರರ ಕುಟುಂಬದ ಅರ್ಹ ಸದಸ್ಯರಿಂದ ಕಡ್ಡಾಯವಾಗಿ ಪಡೆಯಬೇಕು.

18. ಹಾಲು ಉತ್ಪಾದಕರ ಸಹಕಾರ ಸಂಘಗಳು, ಸಹಕಾರಿ ಸಕ್ಕರೆ ಕಾರ್ಖಾನೆಗಳು, ಸಹಕಾರಿ ನೂಲಿನ ಗಿರಣಿಗಳು ಇತ್ಯಾದಿ ಸಹಕಾರಿ ಸಂಘಗಳು ಅವರ ಸದಸ್ಯರಿಗೆ ಹಣ ಪಾವತಿ ಮಾಡುವಾಗ ಅಂತಹ ಸದಸ್ಯರ ಕುಟುಂಬದ ಅರ್ಹ ವ್ಯಕ್ತಿಗಳ ಹೆಸರಿನಲ್ಲಿ ಯಶಸ್ವಿನಿ ವಂತಿಗೆ ಹಣವನ್ನು ಕಡ್ಡಾಯವಾಗಿ ಪಡೆಯಬೇಕು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರನಾಗಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯಕ್ಕೆ ಅರ್ಹನಾಗಿದ್ದಲ್ಲಿ, ಅಂತಹವರನ್ನು ಯಶಸ್ವಿನಿ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸಬಾರದು. ಆದಾಗ್ಯೂ ಯಾವುದೇ ಕಾರಣಕ್ಕಾಗಿ ನೋಂದಾಯಿಸಿದರೂ ಅವರು ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ.

19. ಸುವರ್ಣ ಆರೋಗ್ಯ ಚೈತನ್ಯ ಯೋಜನೆಯು ಫಲಾನುಭವಿಗಳಿಗೆ ಹೆಚ್ಚು ಪ್ರಯೋಜನಕಾರಿ ಇರುವುದರಿಂದ ಹಾಗೂ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯು ಜಾರಿಯಲ್ಲಿರುವ ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ವಂತಿಗೆ ಹಣವನ್ನು ಸರ್ಕಾರವೇ ಭರಿಸುವುದರಿಂದ ಆ ಯೋಜನೆಯ ಸೌಲಭ್ಯವನ್ನು ಅವರು ಪಡೆಯಬಹುದು. ಆದರೆ ಯಶಸ್ವಿನಿ ಯೋಜನೆಯು ಅಂಥವರಿಗೆ ಹೆಚ್ಚು ಪ್ರಯೋಜನಕಾರಿ ಎನಿಸಿದಲ್ಲಿ, ಅವರು ಆ ಯೋಜನೆಯಲ್ಲಿ ದೊರಕದ ಚಿಕಿತ್ಸಾ ಸೌಲಭ್ಯ ಪಡೆಯಲು ಇಚ್ಛಿಸಿದಲ್ಲಿ, ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಳ್ಳಬಹುದು. ಆದರೆ, ಯಶಸ್ವಿನಿ ಯೋಜನೆಯ ನಿಯಮಗಳ ಪ್ರಕಾರ ನೋಂದಾವಣೆ ಅರ್ಹತೆಯನ್ನು ಅವರು ಹೊಂದಿರಬೇಕು ಮತ್ತು ವಾರ್ಷಿಕ ವಂತಿಗೆ ಹಣವನ್ನು ಕಡ್ಡಾಯವಾಗಿ ಪಾವತಿ ಮಾಡಬೇಕು.

20. ರಾಜ್ಯದಲ್ಲಿ ಕೆಲವು ಹಾಲು ಉತ್ಪಾದಕರ ಒಕ್ಕೂಟಗಳು ಮತ್ತು ಕೆಲವು ಸಹಕಾರ ಸಂಘ/ಸಂಸ್ಥೆಗಳು ಅವುಗಳ ಸದಸ್ಯರ ಯಶಸ್ವಿನಿ ವಂತಿಗೆಯಲ್ಲಿ ಭಾಗಶಃ ಹಣವನ್ನು ಸಹಕಾರ ಸಂಘದ ಸ್ವಂತ ಬಂಡವಾಳದಿಂದ ಭರಿಸುತ್ತಿವೆ. ಈ ಪದ್ಧತಿಯನ್ನು ರಾಜ್ಯದ ಎಲ್ಲಾ ಸಹಕಾರ ಸಂಘ ಸಂಸ್ಥೆಗಳೂ ಕೂಡ ಅನುಸರಿಸುವಂತೆ ಸೂಚಿಸಲಾಗಿದೆ.

21. ಲಾಭಗಳಿಸುತ್ತಿರುವ ಸಹಕಾರ ಸಂಘಗಳು ಅವು ಗಳಿಸಿದ ಲಾಭದ ಶೇ.3 ರಷ್ಟು ಹಣವನ್ನು ಯಶಸ್ವಿನಿ ಟ್ರಸ್ಟಿಗೆ ದೇಣಿಗೆ ರೂಪದಲ್ಲಿ ಪಾವತಿ ಮಾಡುವ ಬಗ್ಗೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರಿಂದ ಸುತ್ತೋಲೆ ಹೊರಡಿಸಲಾಗಿದ್ದು, ಆ ಪ್ರಕಾರ ಕಟ್ಟುನಿಟ್ಟಾಗಿ ಕ್ರಮ ಕೈಕೊಳ್ಳತಕ್ಕದ್ದು. ಯಶಸ್ವಿನಿ ಟ್ರಸ್ಟಿಗೆ ಪಾವತಿ ಮಾಡಿದ ದೇಣಿಗೆಗೆ ಆದಾಯ ತೆರಿಗೆ ಅಧಿನಿಯಮದ ಪ್ರಕರಣ 80ಜಿ ಅಡಿಯಲ್ಲಿ ತೆರಿಗೆ ರಿಯಾಯಿತಿ ನೀಡಲಾಗಿದ್ದು, ಈ ಸೌಲಭ್ಯವನ್ನು ಆದಾಯ ತೆರಿಗೆ ಪಾವತಿ ಮಾಡುವ ಸಹಕಾರ ಸಂಘಗಳು ಉಪಯೋಗಿಸಿಕೊಳ್ಳಬೇಕು.

22. 2010–11ನೇ ಸಾಲಿನಲ್ಲಿ ಕೆಲವು ಸದಸ್ಯರು ಯಶಸ್ವಿನಿ ವಂತಿಗೆ ಹಣವನ್ನು ಸಹಕಾರ ಸಂಘಕ್ಕೆ ಪಾವತಿ ಮಾಡಿದ್ದು, ಫೋಟೋ ಇತ್ಯಾದಿ ಅವಶ್ಯಕ ಮಾಹಿತಿಯನ್ನು ಒದಗಿಸದೆ ಇದ್ದ ಕಾರಣದಿಂದ, ಉಪಯೋಗಿಸದೆ ಸಹಕಾರ ಸಂಘದಲ್ಲಿ ಬಾಕಿ ಉಳಿದಿದ್ದರೆ ಆ ವಂತಿಗೆ ಮೊತ್ತವನ್ನು ಸದರಿ ಸಹಕಾರ ಸಂಘವು ಯಶಸ್ವಿನಿ ಟ್ರಸ್ಟಿಗೆ ನೀಡಿದ ದೇಣಿಗೆಯೆಂದು ಪರಿಗಣಿಸತಕ್ಕದ್ದು.

23. 2011–12 ನೇ ಸಾಲಿನ ಯಶಸ್ವಿನಿ ಯೋಜನೆಯ ಅವಧಿಯು ದಿನಾಂಕ: 01.06.2011ರಿಂದ ಪ್ರಾರಂಭವಾಗಿ 2012ರ ಮೇ 31ಕ್ಕೆ ಮುಗಿಯುತ್ತದೆ. ಆದ ಕಾರಣ ಈ ಸುತ್ತೋಲೆ ಅನ್ವಯ ಹೊಸದಾಗಿ ನೋಂದಾವಣೆಯಾಗುವ/ಸೇರ್ಪಡೆಯಾಗುವ ಫಲಾನುಭವಿಗಳು ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ದಿನಾಂಕ: 01.06.2011 ರಿಂದ ಜಾರಿಗೆ ಬರುವಂತೆ ಮಾತ್ರ ಪಡೆಯಲು ಅರ್ಹರಾಗುತ್ತಾರೆ. ಆದ್ದರಿಂದ ಸಹಕಾರ ಸಂಘಗಳು ನೀಡುವ ವಂತಿಗೆ ಹಣ ಸ್ವೀಕೃತಿ ರಶೀದಿ/ಫಲಾನುಭವಿಗೆ ನೀಡುವ ನೋಂದಾವಣೆ ನಮೂನೆ ಭಾಗದ ಪ್ರತಿಯಲ್ಲಿ ಈ ಮೇಲಿನ ಅಂಶವನ್ನು ಸ್ಪಷ್ಟವಾಗಿ ಬರೆಯಬೇಕು ಮತ್ತು ತಿಳುವಳಿಕೆಯನ್ನು ಕೂಡ ಫಲಾನುಭವಿಗೆ ನೀಡಬೇಕು.

ಇತರೆ ವಿಷಯಗಳ ಬಗ್ಗೆ ಈ ಮೊದಲು ನೀಡಲಾದ ಸುತ್ತೋಲೆಗಳಲ್ಲಿ ಮೇಲಿನ ನಿಯಮಗಳಿಗೆ ವಿರುದ್ಧವಲ್ಲದ ಮಾರ್ಗಸೂಚಿ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ. ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ತಿಳುವಳಿಕೆ ನೀಡಲು ಆಯಾ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ವ್ಯಾಪ್ತಿಯ ಇಲಾಖಾಧಿಕಾರಿಗಳ, ಜಿಲ್ಲಾಸಹಕಾರ ಬ್ಯಾಂಕ್‌ಗಳ, ಹಾಲುಉತ್ಪಾದಕರ ಒಕ್ಕೂಟಗಳ ಮತ್ತು ಇತರೆ ಪ್ರಮುಖ ಸಹಕಾರ ಸಂಘ / ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಸಭೆಯನ್ನು ಪ್ರಾಂತ ಮಟ್ಟದಲ್ಲಿ ನಿರ್ವಹಿಸಲು ಸೂಚಿಸಿದೆ. ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರುಗಳು, ಅವರ ಜಿಲ್ಲೆಯ ಎಲ್ಲಾ ಗ್ರಾಮೀಣ ಸಹಕಾರ ಸಂಘಗಳ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ, ಸ್ತ್ರೀಶಕ್ತಿ ಗುಂಪು/ ಸ್ವಸಹಾಯ ಗುಂಪು ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಸಭೆ ಕರೆದು ಕಾರ್ಯಾಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಿಂದ ಲಾಭ ಪಡೆಯುವವರ ಬಗ್ಗೆ ಮಾಹಿತಿಯನ್ನು ನೀಡಿ, ತೆಗೆದುಕೊಂಡ ಕ್ರಮದ ಬಗ್ಗೆ ದಿನಾಂಕ: 31.03.2011 ರೊಳಗೆ ವರದಿಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಸಹಿ/–
(ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಹಕಾರ ಇಲಾಖೆ ಮತ್ತು ಅಧ್ಯಕ್ಷರು
ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಟ್ರಸ್ಟು
ಬೆಂಗಳೂರು.

<u>ಗೆ:</u>

1. ಸಹಕಾರ ಸಂಘಗಳ ನಿಬಂಧಕರು, ಅಲಿ ಆಸ್ಕರ್ ರಸ್ತೆ , ಬೆಂಗಳೂರು.

2. ಸಹಕಾರ ಸಂಘಗಳ ಅಪರ ನಿಬಂಧಕರು, (ಬಳಕೆ ಮತ್ತು ಮಾರಾಟ) ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.ಚಾಮರಾಜಪೇಟೆ ಬೆಂಗಳೂರು
4. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರುಗಳು
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು
6. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಪ್ರಾಂತೀಯ ಜಂಟಿನಿಬಂಧಕರುಗಳು.ಬೆಂಗಳೂರು/ಮೈಸೂರು/ ಬೆಳಗಾಂ/ ಗುಲ್ಬರ್ಗಾ
7. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರುಗಳು.
8. ವ್ಯವಸ್ಥಾಪಕರು, ಮೆಡಿ ಅಸಿಸ್ಟ್ ಇಂಡಿಯಾ ಟಿಪಿಎ ಪ್ರೈ. ಲಿ., ಜೆ.ಪಿ.ನಗರ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾದಿಕಾರಿಗಳು.
3. ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್‌ನ ಎಲ್ಲಾ ಟ್ರಸ್ಟೀಗಳು.

ಪ್ರತಿಯನ್ನು:

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇವರಿಗೆ ರವಾನಿಸುತ್ತಾ ಸಹಕಾರ ಪತ್ರಿಕೆಯಲ್ಲಿ ಮುಂದಿನ ವಾರದ ಸಂಚಿಕೆಯಲ್ಲಿ ಮುದ್ರಿಸುವಂತೆ ಕೋರಲಾಗಿದೆ.